ಪ್ರಾಥಮಿಕ (ಅನುದಾನ ಪಡೆಯುವ) ಶಾಲೆಗಳ ಶಿಕ್ಷಕರ ವೇತನ ಶ್ರೇಣಿಯ ಕುರಿತು

೧೪೪೨ (೪೯೨)(ಎ) ಶ್ರೀ ಜ್ಯೋಸಿಯಸ್ ಡಿಸೋಜ (ಮಂಗಳೂರು).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯ ಸರ್ಕಾರದವರು ಈಗಾಗಲೇ ಆಜ್ಞೆ ಮಾಡಿರುವ ಹೈದರಾಬಾದ್ ವೇತನ ಶ್ರೇಣಿಯನ್ನು ಅನುದಾನ ಪಡೆಯುವ ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೂ ವಿಸ್ತರಿಸದಿರಲು ಕಾರಣಗಳೇನು?

ಆ) ಅನುದಾನ ಪಡೆಯುವ ಶಾಲೆಯವರಿಗೂ ಈ ಸವಲತ್ತನ್ನು ವಿಸ್ತರಿಸುವ ಯೋಜನೆ ಸರ್ಕಾರದಲ್ಲಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಈ ಎರಡು ವರ್ಗಗಳು (ಸರ್ಕಾರಿ ಮತ್ತು ಅನುದಾನ ಪಡೆಯುವ) ಈ ತನಕ ಹೊಂದುತ್ತಿದ್ದ ಸಮಾನ ವೇತನ ಶ್ರೇಣಿಯನ್ನು ಒಂದು ವರ್ಗಕ್ಕೆ ನೀಡದಿರುವುದಕ್ಕೆ ಸರ್ಕಾರ ದವರ ಉದ್ದೇಶವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ರಾಷ್ಟ್ರದ ಪರಮೋಚ್ಚ ನ್ಯಾಯಾಲಯದ ಮುಂದೆ ಆದ ರಾಜಿ ಸೂತ್ರದ ಪರಿಣಾಮ ವಾಗಿ ಸರ್ಕಾರ ತನ್ನ ಆದೇಶ ಸಂಖ್ಯೆ ಇಡಿ ೭೬ಎಂಡಬ್ಲ್ಯೂಪಿ ೭೮, ದಿನಾಂಕ ೧೦.೮.೧೯೭೯ರ ಹೈದರಾಬಾದ್ ಪ್ರದೇಶದ ಶಿಕ್ಷಕರ ವೇತನ ಶ್ರೇಣಿಯನ್ನು ರಿಟ್ ಅರ್ಜಿದಾರರಿಗೂ ಹಾಗೂ "ಅವರಂತೆಯೇ ಇರುವ" (ಸಿಮಿಲರ್ಲಿ ಪ್ಲೇಸ್ಡ್) ಇತರೆ ಶಿಕ್ಷಕರುಗಳಿಗೆ ಅನ್ವಯಿಸುವಂತೆ ಆದೇಶ ಹೊರಡಿಸಿತು.

ರಿಟ್ ಅರ್ಜಿದಾರರೆಲ್ಲರೂ ಸರ್ಕಾರಿ ಶಾಲೆಗಳ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರಿಂದ ಅನುದಾನ ಪಡೆಯುವ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಈ ಸೌಲಭ್ಯ ವಿಸ್ತರಿಸಿಲ್ಲ.

ಆ) ಇಲ್ಲ.

ಇ) ರಾಷ್ಟ್ರದ ಪರಮೋಚ್ಚ ನ್ಯಾಯಾಲಯದ ಮುಂದೆ ಆದ ರಾಜಿ ಸೂತ್ರದ ಆಧಾರದ ಮೇರೆಗೆ ಈ ಸೌಲಭ್ಯವನ್ನು ರಿಟ್ ಅರ್ಜಿದಾರರು ಹಾಗೂ ಅವರಂತೆಯೇ ಇರುವ ಶಿಕ್ಷಕರುಗಳಿಗೆ ಮಾತ್ರ ವಿಸ್ತರಿಸಲು ಅವಕಾಶವಿರುತ್ತದೆ.

ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿರುವ ತಾರಕಾ ಜಲಾಶಯ

೧೪೫೩ (೫೫೭) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿರುವ ತಾರಕಾ ಜಲಾಶಯದಿಂದ ಉದ್ದೇಶಿತ ಆಚ್ಚುಕಟ್ಟು ಪ್ರದೇಶಕ್ಕೆ ನೀರನ್ನೊದಗಿಸಲು ಸಾಧ್ಯವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರದವರು ಕೈಕೊಂಡಿರುವ ಕ್ರಮವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಜಲಾಶಯದ ಪ್ರದೇಶದಲ್ಲಿ ಇದುವರೆಗೆ ಒದಗುತ್ತಿರುವ ನೀರಿನ ಪ್ರಮಾಣವು ಪೂರ್ಣ ಯೋಚಿತ ಆಚ್ಚುಕಟ್ಟು ಪ್ರದೇಶವಾದ ೮೫೦೩ ಹೆಕ್ಟೇರ್ (೨೨,೦೦೦ ಎಕರೆ) ನೀರಾವರಿಗೆ ಸಾಕಾಗು ವುದಿಲ್ಲವಾದ್ದರಿಂದ ಸದರಿ ಯೋಜನೆಯ ಆಚ್ಚುಕಟ್ಟನ್ನು ಸದ್ಯಕ್ಕೆ ೭೦೪೦ ಹೆಕ್ಟೇರ್ (೧೭೪೦೦ ಎಕರೆ) ಪ್ರದೇಶಕ್ಕೆ ಸೀಮಿತಗೊಳಿಸಲಾಗಿದೆ. ತಾಂತ್ರಿಕ ಸಮಿತಿಯ ಅಭಿಪ್ರಾಯದಂತೆ ಇನ್ನೂ ೧೦ ವರ್ಷಗಳು ಜಲಾಶಯದಲ್ಲಿ ಲಭ್ಯವಾಗುವ ಹೆಚ್ಚಿನ ನೀರನ್ನು ಅಭ್ಯಸಿಸಿದ ನಂತರ ಈ ಯೋಜನೆಯ ವಿಸ್ತರಣೆ ಅಥವಾ ಸುಧಾರಣೆ ಬಗ್ಗೆ ಯೋಚಿಸಲಾಗುವುದು.